**ಸಾಕ್ಷಿಯನ್ನು ದಿನಾಂಕಃ 31-10-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

ನಾವು ಕಡತೋಕಾ ಜಡ್ಡಿಗದ್ದೆಗೆ ಗಸ್ತುಗೆ ಹೋಗುವ ಕಾಲಕ್ಕೆ ಯಾವುದೇ ಪಂಚರನ್ನು ಕರೆದುಕೊಂಡು ಹೋಗಿರಲಿಲ್ಲ. ಆರೋಪಿತರನ್ನು ಜಡ್ಡಿಗದ್ದೆ ಕ್ರಾಸ್ ನಲ್ಲಿ ನೋಡಿದ್ದು, ಅನುಮಾನಾಸ್ಪದವಾಗಿದ್ದುದರಿಂದ ಅವರನ್ನು ಹಿಡಿದಿರುತ್ತೇವೆ. ಸದರಿ ಸ್ಥಳದಿಂದ ಸ್ವಲ್ಪ ದೂರದಲ್ಲಿ ಮನೆಗಳಿವೆ. ಸದರಿ ಸ್ಥಳದಲ್ಲಿ ಕೆಲವು ಅಂಗಡಿಗಳು ಇದ್ದವು ಆದರೆ ಅವುಗಳನ್ನು ಮುಚ್ಚಲಾಗಿತ್ತು, ಜನರು ಯಾರೂ ಇರಲಿಲ್ಲ. ಸದರಿ ಸ್ಥಳದಲ್ಲಿ ಸುಮಾರು ಅರ್ಧಗಂಟೆಗಳ ಕಾಲ ಆರೋಪಿತರನ್ನು ವಿಚಾರಿಸಿರುತ್ತೇವೆ. ಸದರಿ ಸ್ಥಳದಲ್ಲಿ ಅವರ ಸ್ವ ಖುಷಿ ಹೇಳಿಕೆ ಪಡೆದುಕೊಂಡಿಲ್ಲ. ಸಂಶಯ ಬಂದಿದ್ದರಿಂದ ಅವರನ್ನು ಠಾಣೆಗೆ ಕರೆದುಕೊಂಡು ಹೋಗಿರುತ್ತೇನೆ. ಪೋಲೀಸ್ ಠಾಣೆಯಲ್ಲಿ ಸ್ವ ಖುಷಿ ಹೇಳಿಕೆಯನ್ನು ಪಡೆದಿರುತ್ತೇನೆ. ಆ ಕಾಲಕ್ಕೆ ಠಾಣೆಯಲ್ಲಿ ಯಾರೂ ಇರಲಿಲ್ಲ. ಆರೋಪಿತರು ಯಾವುದೇ ಸ್ವ ಖುಷಿ ಹೇಳಿಕೆಯನ್ನು ನೀಡದೇ ಇದ್ದರೂ ಅವರನ್ನು ಬೆದರಿಸಿ ಖಾಲಿ ಹಾಳೆಗಳ ಮೇಲೆ ಅವರ ಸಹಿ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಈ ಪ್ರಕರಣ ಅಲ್ಲದೇ ಸುಮಾರು 8 ರಿಂದ 10 ಪ್ರಕರಣಗಳಲ್ಲಿ ಕಳುವು ಮಾಡಿರುವುದಾಗಿ ನನಗೆ ಹೇಳೇ ಇಲ್ಲ ಎಂದರೆ ಸರಿಯಲ್ಲ. ಕುಮಟಾದ ಮಣಪ್ಪುರಂ ಸಂಸ್ಥೆ ಒಂದು ದೊಡ್ಡ ಸಂಸ್ಥೆ ಎಂದರೆ ಸಾಧಾರಣ ಮಟ್ಟಿಗೆ ದೊಡ್ಡ ಸಂಸ್ಥೆ ಎನ್ನುತ್ತಾರೆ. ಕುಮಟಾದಲ್ಲಿ ಎರಡು ಮಣಪ್ಪುರಂ ಶಾಖೆಗಳು ಇವೆ. ಅವುಗಳಲ್ಲಿ ಒಂದು ನೆಲ್ಲಿಕೇರಿಯಲ್ಲಿ, ಇನ್ನೊಂದು ಸುಭಾಸ್ ರಸ್ತೆಯಲ್ಲಿದೆ. ಮಣಪ್ಪುರಂ ಫೈನನ್ಸನಲ್ಲಿ ಸಿಸಿ ಕ್ಯಾಮರಾಗಳು ಇವೆ ಎಂದರೆ ಸರಿ. ನಾನು ಮಣಪ್ಪುರಂ ಫೈನನ್ಸಗೆ ಹೋಗಿ ಸಿಸಿಟಿವಿ ಪರಿಶೀಲಿಸಿಲ್ಲ. ಮಣಪ್ಪುರಂ ಫೈನನ್ಸನಲ್ಲಿ ಮ್ಯಾನೇಜರ್ ಮತ್ತು ಸಿಬ್ಬಂದಿಗಳು ಇದ್ದಾರೆ ಎಂದರೆ ಸರಿ. ಮಣಪ್ಪುರಂ ಫೈನನ್ಸನಲ್ಲಿ ದಿನನಿತ್ಯದ ವ್ಯವಹಾರಗಳನ್ನು ರಜಿಸ್ಟರನಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ಸದರಿ ರಜಿಸ್ಟರನ್ನು ಅಮಾನತ್ತು ಪಡಿಸಿಕೊಂಡಿದ್ದೀರಾ ಎಂದರೆ ನಾನು ಅಮಾನತ್ತುಪಡಿಸಿಕೊಂಡಿಲ್ಲ, ಮುಂದಿನ ತನಿಖಾಧಿಕಾರಿಗಳು ಅಮಾನತ್ತುಪಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ಬಂಗಾರ ಅಡವು ಇಡುವ ಕಾಲಕ್ಕೆ ಮಣಪ್ಪುರಂ ಫೈನನ್ಸನವರು ರಸೀದಿ ನೀಡಿರುತ್ತಾರೆ, ಆದರೆ ನಾನು ಅದನ್ನು ಅಮಾನತ್ತುಪಡಿಸಿಕೊಂಡಿಲ್ಲ. ಮಣಪ್ಪುರಂ ಫೈನನ್ಸನವರು ಯಾವುದೇ ಮೂಗುತಿಯನ್ನು ಹಾಜರುಪಡಿಸಿಲ್ಲ, ನಾನು ಆರೋಪಿತರ ಮನೆಯಿಂದ ಬಲವಂತವಾಗಿ ಕಿತ್ತುಕೊಂಡುಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಯಾವುದೇ ಒಡವೆಗಳನ್ನು ಆರೋಪಿತರು ಮಣಪ್ಪುರಂ ಫೈನನ್ಸನಲ್ಲಿ ಅಡವು ಇಟ್ಟಿರುವುದಿಲ್ಲ ಮತ್ತು ನಾನು ಅದನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಒಂದುವೇಳೆ ಒಡವೆಗಳನ್ನು ಅಮಾನತ್ತುಪಡಿಸಿಕೊಂಡಿದ್ದರೆ ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ಅಮಾನತ್ತುಪಡಿಸಿಕೊಳ್ಳುತ್ತಿದ್ದು ಆರೋಪಿತರ ವಿರುದ್ಧ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಣಪ್ಪುರಂ ಫೈನನ್ಸನಲ್ಲಿ ರಸೀದಿ ಪುಸ್ತಕವನ್ನು ನಾನು ನೋಡಿದ್ದೇನೆ. ಸದರಿ ರಜಿಸ್ಟರನ್ನು ಮುಂದಿನ ತನಿಖಾಧಿಕಾರಿಗಳು ಅಮಾನತ್ತುಪಡಿಸಿಕೊಂಡಿರುತ್ತಾರೆ. ಆರೋಪಿತರ ಸಹಿ ಇರುವ ರಸೀದಿಗಳನ್ನು

ಫೈನನ್ಸನಲ್ಲಿ ನಾನು ನೋಡಿದ್ದೇನೆ. ಅವುಗಳನ್ನು ನಾನು ಅಮಾನತ್ತುಪಡಿಸಿಕೊಂಡಿಲ್ಲ, ಮುಂದಿನ ತನಿಖಾಧಿಕಾರಿಗಳು ಅಮಾನತ್ತುಪಡಿಸಿಕೊಂಡಿದ್ದಾರೆ. ಚಾಸಾ-4 ಮತ್ತು 5 ರವರನ್ನು ಪಂಚರನ್ನಾಗಿ ಕರೆದುಕೊಂಡು ಆರೋಪಿತರ ಮನೆಯ ಹತ್ತಿರ ಹೋಗೇ ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲೇ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರಿಂದ ಚಾಸಾ-1 ರವರ ಒಡವೆ ಇಟ್ಟಿದ್ದ ಪರ್ಸನ್ನು ಅಮಾನತ್ತುಪಡಿಸಿಕೊಂಡಿಲ್ಲ. ಆರೋಪಿತರ ಮನೆಗೆ ಹೋಗಿ ನಾನು ದೌರ್ಜನ್ಯದಿಂದ ಮನೆಯಲ್ಲಿದ್ದ ಬಂಗಾರದ ಒಡವೆಗಳನ್ನು ಪಡೆದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರನ್ನು ಜಡ್ಡಿಗದ್ದೆ ಹತ್ತಿರ ಹಿಡಿದಾಗ ನಮ್ಮ ವಾಹನದ ಮೇಲೆ ಅವರನ್ನು ಕರೆದುಕೊಂಡು ಬಂದಿರುತ್ತೇವೆ, ಅವರ ಬೈಕನ್ನು ನಮ್ಮ ಸಿಬ್ಬಂದಿಗಳು ತಂದಿರುತ್ತಾರೆ. ಪಂಚನಾಮೆಯನ್ನು ಮರುದಿನ ಮಾಡಿರುತ್ತೇನೆ. ಠಾಣೆಗೆ ತಂದ ಬೈಕುಗಳನ್ನು ಠಾಣಾ ದಿನಚರಿಯಲ್ಲಿ ನಮೂದಿಸಿ ಠಾಣಾ ಸೆಂಟ್ರಿಯವರ ಸ್ವಾದೀನಕ್ಕೆ ನೀಡಿರುತ್ತೇನೆ. ಈ ಬಗ್ಗೆ ಸೆಂಟ್ರಿಯ ಹೇಳಿಕೆಯನ್ನು ಪಡೆದಿಲ್ಲ. ಕಳುವು ಆಗಿದೆ ಎಂದು ಹೇಳುವ ಯಾವುದೇ ಮನೆಗೆ ನಾನು ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನೀಡಿರುವ ಮಾಹಿತಿಯಂತೆ ಕಳುವು ಮನೆಗೆ ಭೇಟಿ ನೀಡಿ ಒಡವೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪಂಚನಾಮೆ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-14 ರಿಂದ 18 ರವರಿಂದ ಯಾವುದೇ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ. ಸಹಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**